ಸೂರ್ಯೋದಯದ ಸಮಯ. ಹೊರಡುವ ಮುನ್ನ ನನ್ನತ್ತ ತಿರುಗಿ ನೋಡದೆ ಪ್ರಥಮ ಬಾರಿಗೆ ಮಾತನಾಡಿದರು.

'ನೀನ್ಯಾರು?' ನಾನು ಬೆವತು ಹೋದೆ. ಬಾಯಿಯ ಪಸೆ ಸಂಪೂರ್ಣವಾಗಿ ಆರಿಹೋಯಿತು.

'ನಾ...ನು...ಮಹಾರಾಣಿ ...ಅಂಬಿಕೆ' ಮುಂದೆ ನಾಲಿಗೆ ಬಾಯಿಗಂಟಿಕೊಂಡಂತೆ ಆಗಿ ಮಾತು ಹೊರಡಲಿಲ್ಲ.

'ನೀನೆಂತಹ ಮುಗ್ಧೆಯಮ್ಮ. ಸಟೆಯಾಡಲೂ ಬರುವುದಿಲ್ಲವಲ್ಲಾ. ನೀನು ಅಂಬಿಕೆ ಎಂದು ಹೇಳುವುದು ವಂಚನೆಯಲ್ಲವೇ? ಈಗಲಾದರೂ ಸತ್ಯವನ್ನಾಡು'

'ನಾನು ಅಂಬಿಕೆಯ ದಾಸಿ' ಎಂದೆ ತಲೆತಗ್ಗಿಸಿ.

'ಅರ್ಥವಾಯಿತು. ಒಡತಿಯ ಆಜ್ಞೆ ಪಾಲಿಸುತ್ತಿದ್ದೀಯ ಅಲ್ಲವೇ? ಮುಂದೆ ಇನ್ನೇನೂ ಹೇಳಬೇಕಿಲ್ಲ' ಎಂದವರೆ ಹೊರಟುಹೋದರು.

* * *

ನಾನು ಗರ್ಭ ಧರಿಸಿದ ಸೂಚನೆ ಕಾಣಿಸುತ್ತಲೂ ಕತ್ತಲ ಕೋಣೆಯ ಬಂಧಿಯಾದೆ. ನನಗೆ ವಾಂತಿಯಾದರೆ ಅಂಬಿಕೆ ಅದನ್ನು ಹೊರಜಗತ್ತಿಗೆ ಅಭಿನಯಿಸಿ ತೋರ್ಪಡಿಸುವಳು. ನನ್ನ ಗರ್ಭ ಬೆಳೆದಂತೆ ಬಟ್ಟೆ ಸುತ್ತಿದ ಅವಳ ಹೊಟ್ಟೆಯೂ ಬೆಳೆಯತೊಡಗಿತು. ನಾನು ಪ್ರಸವ ವೇದನೆಯಿಂದ ನರಳಿದಾಗ ಅವಳೂ ಅದನ್ನು ಪ್ರತಿಧ್ವನಿಸಿದಳು. ಹೆರಿಗೆ ಮಾಡಿಸಿದ ಸೂಲಗಿತ್ತಿಗೆ ರತ್ನಹಾರ ನೀಡಿ ಬಾಯ್ಮುಚ್ಚಿಸಿದಳು.

ಹೆರಿಗೆಯಾದ ಮರುದಿನ ಮಗುವಿಗೆ ಹಾಲೂಡಿಸುತ್ತಿದ್ದೆ. ನನ್ನ ಕತ್ತಲಕೋಣೆಯ ಬಾಗಿಲು ತೆಗೆದು ಒಳಬಂದ ಅಂಬಿಕೆ 'ರಾಜಮಾತೆ ಮಗುವನ್ನು ನೋಡಲು ಬಂದಿದ್ದಾರೆ. ಮಗುವನ್ನಿತ್ತ ಕೊಡು' ಎಂದು ಸೆಳೆದುಕೊಂಡಳು. 'ಒಡತಿ, ಕೊಡಲಾರೆ. ಇದು ನನ್ನ ಮಗು' ನನ್ನನ್ನೂ ಮೀರಿ ಮಾತುಗಳು ಹೊರ ಬಂದುಬಿಟ್ಟವು. ಅಂಬಿಕೆ ಕೆಂಡವಾದಳು.

'ಮಗು ನಿನ್ನದಲ್ಲ. ನೀನು ಕೇವಲ ಬಾಡಿಗೆಯ ತಾಯಿ. ಅಸಹ್ಯ ತರಿಸುವ ಆಮುನಿಯಸಂಗ, ಮತ್ತೊಂದು ಬಸಿರು ಹೆರಿಗೆಯ ಸಂಕಟ ನೋವು ಭರಿಸಲಾರದೆ ನಿನ್ನನ್ನು ಕಳುಹಿಸಿದೆ ಅಷ್ಟೆ. ಹಾಗೆಂದೊಡನೆ ಮಗು ನಿನ್ನದಾಯಿತೇ? ಇದು ನನ್ನ ಸ್ವತ್ತು. ತಾ ಇತ್ತ' ಎಂದು ಪ್ರಜ್ಞೆ ಕಳೆದುಕೊಂಡವಳಂತೆ ಕಿರುಚಿದಳು. ಮರು ಕ್ಷಣ ಬಾಗಿಲು ಧಡಾರನೆ ತೆರೆದುಕೊಂಡಿತು. ರಾಜಮಾತೆ ಒಳಗಡಿ ಇಟ್ಟಿದ್ದರು.

'ಅಂಬಿಕೆ, ಮಗುವನ್ನು ತಾಯಿಗೆ ನೀಡು' ಆಜ್ಞೆ ಮಾಡಿದರು.

'ತಾಯಿ! ನಾನೇ ಮಗುವಿನ ತಾಯಿ ಅತ್ತೆಯವರೆ'

'ನಾಟಕ ಸಾಕು ಅಂಬಿಕೆ. ನೀ ಮಾಡಿದ ದ್ರೋಹ ನಾ ಬಲ್ಲೆ. ವ್ಯಾಸಮುನಿ ನನಗೆಲ್ಲಾ ತಿಳಿಸಿದ್ದಾನೆ. ತಕ್ಕ ಸಮಯಕ್ಕಾಗಿ ಕಾದಿದ್ದೆ ಅಷ್ಟೆ. ನಿನ್ನ ಕುಟಿಲತೆಯಿಂದ ಒಬ್ಬ ಮಹಾನುಭಾವ ಕುರುವಂಶದ ಉತ್ತರಾಧಿಕಾರಿಯಾಗುವುದು ತಪ್ಪಿಹೋಯಿತು. ಅದು ನನ್ನ ವಿಧಿ. ಕಾಲಮಿಂಚಿದೆ. ನಿನ್ನನ್ನು ದೂರಿ ಫಲವಿಲ್ಲ' ಎಂದು ಮಗುವನ್ನು ಎತ್ತಿ ತಬ್ಬಿಕೊಂಡರು. ಅಂದೇ ನಾನು ದಾಸ್ಯದಿಂದ ಮುಕ್ತಳಾದೆ. ನನಗೂ ನನ್ನ ಮಗುವಿಗೂ ರಾಜಮಾತೆ ತನ್ನ ಅಂತಃಪುರದಲ್ಲಿ ಆಶ್ರಯ ನೀಡಿದರು. ನನ್ನ ಮಗ ಅವರ ಮಡಿಲಿನಲ್ಲಿಯೇ ಬೆಳೆದ. ಪಿತಾಮಹರಿಗೂ ಇವನಮೇಲೆ ವಿಶೇಷ ಅಕ್ಕರೆ. ಇವನ ಆಟಪಾಠಗಳೆಲ್ಲಾ ಅವರ ಕಕ್ಷೆಯಲ್ಲಿಯೇ. ಎಷ್ಟೋ ವೇಳೆ ಅವರ ಶಯ್ಯೆಯಲ್ಲಿಯೇ ಮಲಗಿಬಿಡುತ್ತಿದ್ದ. ಎಲ್ಲರೂ ದಾಸೀಪುತ್ರನೆಂದು ಕರೆದರೂ ಅವರೊಂದು ಶುಭದಿನ ನಾಮಕರಣ ಮಾಡಿ 'ವಿದುರ'ನೆಂದು ಪ್ರೀತಿಯಿಂದ ಕರೆದರು. ವಿದುರ ಎಂದರೇನೆಂದು ನಿನಗೆ ತಿಳಿದಿದೆಯೇ ಕುಂತಿ?' ಕುಂತಿ ತಲೆಯಾಡಿಸಿದಳು.

'ವಿದುರ ಎಂದರೆ ಎಲ್ಲವನ್ನೂ ತಿಳಿದವನು, ವಿದ್ವಾಂಸ ಎಂದಂತೆ. ಈ ಹೆಸರು ಅವನಿಗೆ ಅನ್ವರ್ಥ ಎಂದು ಅವನಿಗೆ ವಿದ್ಯೆ ಹೇಳಿದ ಗುರುಗಳು ಹೇಳುತ್ತಿದ್ದರು. ಎಲ್ಲಾ ರೀತಿಯಲ್ಲಿ ಸಮರ್ಥನಿದ್ದರೂ ದಾಸಿಪುತ್ರನೆಂಬ ಕಳಂಕ ಹೊತ್ತ ವಿದುರನಿಗೆ ಪಟ್ಟ ತಪ್ಪಿ ಅಂಧ ಧೃತರಾಷ್ಟ್ರನಿಗೆ ಪಟ್ಟವಾಯಿತು. ನನ್ನ ಕಣ್ಣೀರು ವರೆಸಿದ ಪಿತಾಮಹರು ವಿದುರನನ್ನು ಅಮಾತ್ಯನನ್ನಾಗಿ ಮಾಡಿ ದೊರೆಗೆ ಮಾರ್ಗದರ್ಶನ ಮಾಡಲು ನೇಮಿಸಿದರು. ನಿನ್ನ ಮಕ್ಕಳ ಭವಿಷ್ಯದ ಬಗ್ಗೆ ನೀ ಚಿಂತಿಸದಿರು ಕುಂತಿ. ತಡವಾಗಿಯಾದರೂ ವಿದುರನಂತಹವರಿಂದ, ಯಾದವ ಕೃಷ್ಣನಂತಹವರಿಂದ ನ್ಯಾಯಕ್ಕೆ ಧರ್ಮಕ್ಕೆ ಜಯವಾಗಿಯೇ ತೀರುತ್ತದೆ.'

ಕುಂತಿ ವೃದ್ಧೆಯನ್ನು ಗೌರವದಿಂದ ದಿಟ್ಟಿಸಿದಳು. ದಾಸಿಯಾಗಿ ಬಂದಾಕೆ ಜೀವನದ ಮೂಸೆಯಲ್ಲಿ ಬೆಂದು ಬಹಳ ಎತ್ತರಕ್ಕೆ ಬೆಳೆದು ಬಿಟ್ಟಿದ್ದಳು. ತನ್ನತ್ತೆಯ ಸ್ಥಾನದಲ್ಲಿದ್ದವಳ ಮೇಲೆ ಅಭಿಮಾನ ಉಕ್ಕಿತು. ಕಾಲ್ಮುಟ್ಟಿ ಪಾದಧೂಳಿ ಶಿರದಲ್ಲಿ ಧರಿಸಬೇಕೆನಿಸಿತು. ಹಾಗೆಯೇ ಮಾಡಿದಳು.

## ಹನಿಗವನಗಳು

ಡಾ. ವಿ. ಪುಗಳೇಂದಿ, ಬಳ್ಳಾರಿ



ಚಿತ್ರ: ಈಶ್ವರ ಬಡಿಗೇರ

### ಮೌಲ್ಯ

ಚಿತ್ರದ ಮೇಲೆ
ಚೆಲ್ಲಿದ ಚಹಾ.
ಹೆಚ್ಚಿಸುತ್ತಿದೆ
ಮೌಲ್ಯವನ್ನು.

### ವಿಶ್ರಾಂತಿ

ವಿಶ್ರಾಂತಿ ಪಡೆಯುತ್ತಿದೆ
ರೈಲು ಬಾರದ
ಸಮಯಗಳಲ್ಲಿ
ಕೂಗಿ ಮಾರುವವನ ಧ್ವನಿ.

### ಸೃಷ್ಟಿ

ದೇವರ ಕರಗಳು
ಪದೇ ಪದೇ
ಮುಗಿಯುತ್ತಿವೆ
ಚಿತ್ರಕಾರನಿಗೂ ಶಿಲ್ಪಿಗೂ.

### ಮೌನ

ಕಾಲೇಜು ಬದುಕಿನ
ಕೊನೆಯ ದಿನ
ಅಲ್ಲಲ್ಲಿ ಚೆಲ್ಲಾಪಿಲ್ಲಿಯಾಗಿವೆ
ಹೇಳದ ಪ್ರೀತಿಗಳು.

### ಚಿಟ್ಟೆ

ಹೂವೊಂದನ್ನು ಬಿಡಿಸಿ
ಒಳಗೆ ಹೋಗಿ
ಬರುವುದರಲ್ಲಿ
ಕಾಗದದ ಮೇಲೆ
ಕುಳಿತಿದೆ ಚಿಟ್ಟೆಯೊಂದು.

### ಅಪಘಾತ

ಹೊಸ ವಾಹನದ
ಮೊದಲ ಓಟವೇ
ಒಂದು ಅಪಘಾತ.
ಪುಡಿಯಾಗಿದ ನಿಂಬೆ.